Villages without public drinking water wells in Mulbagal taluk, Kolar District.

*Q.—445. Sri J. NARAYANAPPA (Mulbagal).—

Will the Government be pleased to state :—

(*a*) the number of villages in Mulbagal Taluk, Kolar District, in which there are no public drinking water wells ;

(*b*) the names of villages in the said Taluk in which there are no drinking water wells for Harijans and where Harijans have to depend upon ponds and tanks situated far off from their place of residence ?

A.—Sri KONDAJJI BASAPPA (Deputy Minister for Co-operation).—

(*a*) 86

(*b*) 1 Patrahalli
2 Chammaraddihalli
3 Byrakur
4 Padmaghatta
5 P. Gangapura
6 Gumkal
7 Doolapalli
8 Perumakalahalli
9 Mustoor
10 Hanumanahalli
11 N. Vaddahalli
12 Jodi Thimmapura
13 Byatanur
14 Kadakachanahalli
15 Nangli
16 Chowdenahalli
17 Somarasanahalli
18 Nagamangala
19 Mallappanahalli
20 Doddiganahalli
21 Keelaholali
22 Segehalli
23 Sangadoddi
24 Chennapura
25 Jallappalli
26 Thatikal
27 Maraheru
28 Kumadenahalli
29 Hanumanthapura
30 Asli Attikunte
31 Bhatuvarahalli
32 Viranagenahalli
33 Kuppandahalli
34 Mopurahalli
35 Dommasandra
36 Ramapura
37 Bhatlbhavanahalli
38 Ganjikunte
39 Ramasandra
40 J. Agrahara
41 Bommasandra

ಶ್ರೀ ಜೆ. ನಾರಾಯಣಪ್ಪ.—ನಾನು ಮುಳುಬಾಗಿಲು ತಾಲ್ಲೂಕಿನಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಬಾವಿಗಳಿಲ್ಲದ ಊರುಗಳೆಷ್ಟು ಮತ್ತು ಹರಿಜನರಿಗೆ ಕುಡಿಯಲು ಕುಡಿಯುವ ನೀರಿನ ಬಾವಿಗಳಿಲ್ಲದ ಊರುಗಳೆಷ್ಟು ಎಂದು ಪ್ರಶ್ನೆ ಕಳುಹಿಸಿದ್ದೆನು. ಅದಕ್ಕೆ ಉತ್ತರವಾಗಿ 86 ಮತ್ತು 41 ಗ್ರಾಮಗಳೆಂತ ತಿಳಿಸಲಾಗಿದೆ. ಅಂದರೆ ಆ ತಾಲ್ಲೂಕಿನಲ್ಲಿ 127 ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲವೆಂತಲೇ ?

†ಶ್ರೀ ಕೊಂಡಜ್ಜಿ ಬಸಪ್ಪ.—ಆ ತಾಲ್ಲೂಕಿನಲ್ಲಿ 290 ಗ್ರಾಮಗಳಿವೆ. ಈಗ ಸಾರ್ವಜನಿಕರಿಗೆ ಕುಡಿಯುವ ನೀರಿನ ಬಾವಿಗಳು 86 ಗ್ರಾಮಗಳಲ್ಲಿಲ್ಲವೆಂದು ತಿಳಿಸಿದ್ದಾಗ್ಗೂ ಆ ಪೈಕಿ 55 ಗ್ರಾಮಗಳಲ್ಲಿ ಪ್ರೈವೇಟ್ ಪಾರ್ಟಿಗಳ ಬಾವಿಗಳಿರುತ್ತವೆ. ಆದರೆ ಇನ್ನುಳಿದ 31 ಗ್ರಾಮಗಳಲ್ಲಿ ಮಾತ್ರ ಕೆರೆ-ಕೊಳಗಳ ನೀರನ್ನೇ ಉಪಯೋಗಿಸಬೇಕಾಗಿದೆ.

ಶ್ರೀ ಜೆ. ನಾರಾಯಣಪ್ಪ.—ಹೀಗೆ ಕುಡಿಯುವ ನೀರಿನ ಬಾವಿಗಳೊಂದೂ ಇಲ್ಲದ ಎಷ್ಟು ಗ್ರಾಮಗಳಲ್ಲಿ ಈಗ ಬಾವಿಗಳನ್ನು ತೆಗೆಸಲು ಮಂಜೂರಾಗಿದೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಈಗ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲದ ಪ್ರತಿ ಗ್ರಾಮಕ್ಕೂ ಒಂದೊಂದು ಕುಡಿಯುವ ನೀರಿನ ಬಾವಿಯನ್ನೊದಗಿಸಬೇಕೆಂಬ ಯೋಜನೆಯಿದೆ. ಆದರೆ ಜನಗಳಿಂದ ಈ ಯೋಜನೆಯ ಉಪಯೋಗವನ್ನು ಪಡೆದುಕೊಳ್ಳಲು ಸರಿಯಾಗಿ ಅವರಿಂದ ಕಾಂಟ್ರಿಬ್ಯೂಷ್ನ್ ಬರುತ್ತಿಲ್ಲ.

ಶ್ರೀ ಜೆ. ನಾರಾಯಣಪ್ಪ.—ಆ ಕಾಂಟ್ರಿಬ್ಯೂಷ್ನ್ ಎಷ್ಟು ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಪಾಪುಲರ್ ಕಾಂಟ್ರಿಬ್ಯೂಷ್ನ್ ಒಂದೊಂದು ಐಟಂಗೆ ಒಂದೊಂದು ರೇಟಿರುತ್ತೆದೆ ಇದರಲ್ಲಿ ಮೂರು ಸ್ಕೀಮುಗಳಿವೆ. ಒಂದೊಂದಕ್ಕೂ ಒಂದೊಂದು ರೀತಿಯ ಪರ್ಸೆಂಟೇಜ್ ಆಫ್ ಕಾಂಟ್ರಿಬ್ಯೂಷನ್ನಿದೆ. ಲೋಕಲ್ ಡೆವಲಪ್ ಮೆಂಟ್ ವರ್ಕ್ಸ್‌ಗಳ ಪ್ರೋಗ್ರಾಂನಲ್ಲಿ 50 ಪರ್ಸೆಂಟ್ ಪಾಪುಲರ್ ಕಾಂಟ್ರಿಬ್ಯೂಷನ್ನಿದ್ದು ಅದರಲ್ಲಿ ಪಬ್ಲಿಕ್ ಕಾಂಟ್ರಿಬ್ಯೂಷ್ನ್ 12½ ಪರ್ಸೆಂಟ್ ಮತ್ತ ಉಳಿದ 37½ ಪರ್ಸೆಂಟ್ ಕಾಂಟ್ರಿಬ್ಯೂಷ್ನ್ ಗ್ರಾಮ ಪಂಚಾಯಿತ್, ತಾಲ್ಲೂಕ್ ಬೋರ್ಡುಗಳಿಂದ ಬರ ಬೇಕಾಗಿರುತ್ತದೆ.

ಇನ್ನು ಹೆಲ್ತ್ ಮತ್ತು ಸ್ಯಾನಿಟೇಷನ್ ಪ್ರೋಗ್ರಾಂನಲ್ಲಿ ಪಾಪ್ಯುಲರ್ ಕಾಂಟ್ರಿಬ್ಯೂಷ್ನ್ 25 ಪರ್ಸೆಂಟ್ ಮತ್ತು ಹರಿಜನ-ಗಿರಿಜನರ ವೆಲ್‌ಫೇರ್ ಸ್ಕೀಂನ ಬಗ್ಗೆ 5 ಪರ್ಸೆಂಟ್ ಕಾಂಟ್ರಿಬ್ಯೂಷ್ನ್ ಕೊಡಬೇಕಾಗಿರುತ್ತದೆ.

ಶ್ರೀ ಜೆ. ನಾರಾಯಣಪ್ಪ.—ಹರಿಜನರೂ ಕಾಂಟ್ರಿಬ್ಯೂಷನ್ ಕೊಡಬೇಕೇ ? ಅವರು ಕೊಡದೇ ಇರುವುದರಿಂದ ತಾನೇ ಈ 41 ಗ್ರಾಮಗಳಲ್ಲಿ ಇದುವರೆಗೂ ಬಾವಿಗಳಾಗದೇ ಇರುವುದು ! ಇದನ್ನು

ವಜಾ ಮಾಡಿಸಬೇಕೆಂದು ಹೇಳಿದರೆ ಸರ್ಕಾರದ ಅಭಿಪ್ರಾಯವೇನು ?

Sri KONDAJJI BASAPPA.—Government will consider the suggestion of the Hon'ble Member.

ಶ್ರೀ ಐ. ನಾರಾಯಣಗೌಡ.—ಮುಳಬಾಗಲು ಒಂದು ತಾಲ್ಲೂಕಿನಲ್ಲಿ 86 ಕುಡಿಯುವ ನೀರಿನ ಬಾವಿಗಳಾಗಬೇಕೆಂದು ಹೇಳಿದ್ದೀರಿ. ಇದೇ ರೀತಿ ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಕುಡಿಯುವ ನೀರಿನ ಬಾವಿಗಳ ಅಭಾವ ಇದ್ದೇ ಇದೆ. ಈಗ ಎರಡನೇ ಪಂಚವಾರ್ಷಿಕ ಯೋಜನೆ ಮುಗಿಯಿತು. ಇನ್ನೂ ಬಾವಿಗಳ ಅಭಾವ ಪೂರೈಸಿಲ್ಲ, ಎಷ್ಟು ಯೋಜನೆಗಳಾದರೂ ಈ ರೀತಿ ಪಾಪ್ಯುಲರ್ ಕಾಂಟ್ರಿಬ್ಯೂಷನ್ ಕೊಡಬೇಕೆಂದರೆ ಇವರ ಅಭಾವ ನೀಗುವುದಿಲ್ಲ. ಆದ್ದರಿಂದ ಪಾಪ್ಯುಲರ್ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳದೇ ಕಂಪಲ್‌ಸರಿಯಾಗಿ ಪ್ರತಿಯೊಂದು ಗ್ರಾಮಕ್ಕೂ ತಾವೇ ಬಾವಿಗಳನ್ನು ಒದಗಿಸಲು ಪ್ರಯತ್ನ ಮಾಡುತ್ತೀರಾ ?

Sri KONDAJJI BASAPPA.—The question of reducing the popular contribution by 15 to 20% is under the consideration of Government.

ಶ್ರೀ ಎಸ್. ಎ. ರಾಮೇಗೌಡ.—ಎಷ್ಟೋ ಗ್ರಾಮಗಳಲ್ಲಿ ಕುಂಟೆಗಳಿಂದ ನೀರು ತರುತ್ತಾ ಇದ್ದಾರೆ. ಇವರಿಗೆ ಇನ್ನು ಎಷ್ಟು ವರ್ಷಗಳ ಕಾಲದಲ್ಲಿ ಈ ಬಾವಿ ನೀರಿನ ಸೌಲಭ್ಯ ಒದಗಿಸಬೇಕೆಂದು ಇದ್ದೀರಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಮೂರನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಪ್ರತಿಯೊಂದು ಊರಿಗೂ ಒಂದೊಂದು ಬಾವಿ ಕೊಡಬೇಕೆಂದು ಉದ್ದೇಶವಿದೆ.

ಶ್ರೀ ಕೆ. ಎಚ್. ರಂಗನಾಥ್.—ಈ 41 ಹಳ್ಳಿಗಳಲ್ಲಿ ಹರಿಜನರು ಕುಡಿಯುವ ನೀರನ್ನು ಎಲ್ಲಿಂದ ತರುತ್ತಾರೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಕೊಳ ಮತ್ತು ಕೆರೆಗಳಿಂದ ತಂದು ಕುಡಿಯುತ್ತಾರೆ.

ಶ್ರೀ ಎಂ. ಸಿ. ಬಸಪ್ಪ.—ಕಳೆದ ಸಾಲಿನಲ್ಲಿ ಕೊಟ್ಟ ಗ್ರಾಂಟ್ ಲ್ಯಾಪ್ಸ್ ಆಯಿತು ಎಂದು ಹೇಳಿದಿರಿ. ಅದನ್ನು ಯಾವ ತಿಂಗಳಿನಲ್ಲಿ ಕೊಟ್ಟಿದ್ದೀರಿ ?

Sri KONDAJJI BASAPPA.—I have no information.

ಶ್ರೀ ಕೆ. ಎಚ್. ರಂಗನಾಥ್.—ಈ 41 ಹಳ್ಳಿಗಳಲ್ಲಿ ಸಾರ್ವಜನಿಕ ಬಾವಿಗಳು ಇಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಬೇರೆ ಬಾವಿಗಳು ಇಲ್ಲ.

ಶ್ರೀ ಜಿ. ಎ. ಗೌಡ.—ಜನವರಿ, ಫೆಬ್ರವರಿಯಲ್ಲಿ ಗ್ರಾಂಟ್ ರಿಲೀಸ್ ಮಾಡುವುದರಿಂದ ಅನೇಕ ಗ್ರಾಮಗಳಲ್ಲಿ ಈ ರೀತಿ ಹಣ ಉಪಯೋಗ ಮಾಡಲು ಸಾಧ್ಯವಾಗುವುದಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Sri KONDAJJI BASAPPA.—That representation is before the Government. We will examine that proposal.

ಶ್ರೀ ಜಿ. ಎ. ಗೌಡ.—ಸರ್ಕಾರಕ್ಕೆ ರಿಲೀಸ್ ಮಾಡದೇ ಜನವರಿ ಫೆಬ್ರವರಿಯಲ್ಲಿ ಕೊಡುವುದರಿಂದ ಮಾರ್ಚ್ 31 ರೊಳಗೆ ಎಲ್ಲವನ್ನೂ ಪೂರ್ತಿಯಾಗಿ ಉಪಯೋಗಿಸಿಕೊಂಡು ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಅಲ್ಲವೇ ?

Sri KONDAJJI BASAPPA.—This year, they have been released in time.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—86 ಹಳ್ಳಿಗಳಲ್ಲಿ ಸಾರ್ವಜನಿಕ ಬಾವಿಗಳಿಲ್ಲ ಎಂದು ಹೇಳಿದ್ದೀರಿ. ಈ 86 ಹಳ್ಳಿಗಳಲ್ಲಿ ಹರಿಜನರಿಗಾದರೂ ಬಾವಿಗಳು ಇವೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅವರಿಗೂ ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ಈ 86 ಹಳ್ಳಿಗಳಲ್ಲಿ ಹರಿಜನರು ಮತ್ತು ಮಿಕ್ಕವರು ಎಲ್ಲಿಂದ ನೀರು ತರುತ್ತಾರೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಈ 86ರಲ್ಲಿ 55 ಹಳ್ಳಿಗಳಲ್ಲಿ ಪ್ರೈವೇಟ್ ವೆಲ್ಸ್ ಇವೆ. ಅವರ ಅನುಮತಿ ಪಡೆದು ಅಲ್ಲಿಂದ ತರುತ್ತಾರೆ. 31 ಗ್ರಾಮಗಳಲ್ಲಿ ಕೊಳ ಮತ್ತು ಕೆರೆಯಿಂದ ತಂದು ನೀರು ಕುಡಿಯುತ್ತಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಸರ್ಕಾರದಲ್ಲಿ ಗ್ರಾಂಟ್ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಯಾವ ತಿಂಗಳಿನಲ್ಲಿ ಮತ್ತು ಯಾವ ತಾರೀಖಿನಲ್ಲಿ ಕೊಟ್ಟಿದ್ದೀರಿ ?

Sri KONDAJJI BASAPPA.—I want notice.

Mr. SPEAKER.—That is too general a question. There will necessarily be a number of applications.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಸರ್ಕಾರದಲ್ಲಿ ಎಂದರೆ ಕಡೇ ತಿಂಗಳಿನಲ್ಲಿ 24ನೇ ತಾರೀಖು ಕೊಟ್ಟು 31ರೊಳಗೆ ಮುಗಿಸಬೇಕೆಂದರೆ ಯಾವ ರೀತಿ ಮಾಡಬೇಕು ?

Mr. SPEAKER.—Is the Hon'ble Member aware of any details of a particular case ? If so, he can mention it.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತಿಪಟೂರು ತಾಲ್ಲೂಕಿನಲ್ಲಿ 26ನೇ ತಾರೀಖು ಗ್ರಾಂಟ್ ಬಂತು.

ಶ್ರೀ ಕೊಂಡಜ್ಜಿ ಬಸಪ್ಪ.—ಹೋದ ವರ್ಷದ್ದು ಹೇಳುತ್ತಾ ಇದ್ದೀರಿ. (ನಗು).

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಪ್ರಜಾಪ್ರಭುತ್ವದಲ್ಲಿ ಹರಿಜನರಿಗೇ ಬೇರೆ, ಸಾರ್ವಜನಿಕರಿಗೇ ಬೇರೆ ಬಾವಿಗಳನ್ನು ಮಾಡುವುದು ಇದು ನಿಮ್ಮ ಸರ್ಕಾರದ ಧ್ಯೇಯವೇ ?

Sri KONDAJJI BASAPPA.—As far as possible we want to avoid that. We do not want to provide separate wells. ಪಬ್ಲಿಕ್ ವೆಲ್ ಇದ್ದರೆ ಅದನ್ನು ಉಪಯೋಗಿಸಬಹುದು. ಆದರೂ ಕೂಡ ಕೆಲವು ಕಡೆ ಹರಿಜನರು ಹೆದರಿಕೊಂಡು ಅಲ್ಲಿಗೆ ಹೋಗುತ್ತಿಲ್ಲ. ಆದ್ದರಿಂದ ಪ್ರತ್ಯೇಕವಾಗಿ ಕೊಡಿ ಎಂದು ಕೇಳುತ್ತಾರೆ; ಕೊಡುತ್ತಾ ಇದ್ದೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಯಾವ ಒಂದು ಬೇಸಿಸ್ ಮೇಲೆ ಮಂತ್ರಿಮಂಡಲ ರಚನೆ ಮಾಡುತ್ತೀರೋ ಅದೇ ಬೇಸಿಸ್ ಮೇಲೆ ಬಾವಿಗಳ ರಚನೆ ಮಾಡುವುದಕ್ಕೆ ಕಷ್ಟವೇನು ?

Mr. SPEAKER.—Please do not answer that question.

ಶ್ರೀ ಎಸ್. ಡಿ. ಸಾಂರಾಜ್ಯ.—ಮಾರ್ಚ್ ತಿಂಗಳಿನಲ್ಲಿ ಗ್ರಾಂಟ್ಸ್ ರ್ಯಾಪ್ಸ್ ಆಗುತ್ತದೆ. ಆದ್ದರಿಂದ ಹಣವನ್ನು ಆದಷ್ಟು ಜಾಗ್ರತೆ ಕೊಟ್ಟು ರ್ಯಾಪ್ಸ್ ಆಗುವುದಕ್ಕೆ ಮೊದಲೇ ಕೆಲಸ ಮಾಡಿ ಮುಗಿಸುವಂತೆ ಮಾಡಲು ಅವಕಾಶ ಮಾಡಿಕೊಡುತ್ತೀರಾ ?

Sri KONDAJJI BASAPPA.—It is not correct, Sir. In fact in Mulabagal taluk Rs. 7500 have been released already. ಕೋಲಾರ ಡಿಸ್ಟ್ರಿಕ್ಟ್‌ಗೆ 30 ಸಾವಿರ ರೂಪಾಯಿ ರಿಲೀಸ್ ಆಗಿದೆ.

Sri J. P. SARVESH.—Will the Government see that Harijans also draw water from common wells because by having separate wells, Harijans would be permanently segregated from the rest of the community ?

Sri KONDAJJI BASAPPA.—It is not the desire of the Government to separate but some of the Harijans themselves want separate wells and Government is forced to provide them separate wells.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮುಳಬಾಗಿಲು ತಾಲ್ಲೂಕಿನಲ್ಲಿ ಹರಿಜನರು ಮತ್ತು ಸವರ್ಣೀಯರು ಒಟ್ಟಿಗೇ ನೀರು ತರತಕ್ಕ ಬಾವಿಗಳು ಎಷ್ಟಿವೆ ?

(No answer)

ಶ್ರೀ ಎಸ್. ವಿ. ರಾಮೇಗೌಡ.—People's contribution ಕೇಳುತ್ತಾಯಿರುವುದರಿಂದ ಈ ಬಾವಿಗಳ ಕೆಲಸ ಸರಿಯಾಗಿ ಆಗುತ್ತಾ ಇಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಇದು ಸುಮಾರು 14 ವರ್ಷಗಳಿಂದಲೂ ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎಸ್. ವಿ. ರಾಮೇಗೌಡ.—ಈಗಾದರೂ people's contribution ತೆಗೆದುಕೊಳ್ಳದೇ ಮೂರನೇ ಪಾಂಚವಾರ್ಷಿಕ ಯೋಜನೆಯಲ್ಲಿ ಉಚಿತವಾಗಿ ಬಾವಿ ತೆಗೆಸಲು ಏರ್ಪಾಡು ಮಾಡುತ್ತೀರಾ ?

Sri KONDAJJI BASAPPA.—It is a suggestion for action.

Beggar Colonies in the State.

*Q.—484 Sri MADE GOWDA (Malavalli).—

Will the Government be pleased to state :—

the number of beggar colonies in the State and the total number of inmates in these colonies ?

A.—Sri D. DEVARAJ URS (Minister for Labour, Housing and Transport) [On behalf of Sri R. M. PATIL (Minister for Home)].—

Three.

No. of inmates :

(*a*) Bangalore	...	218
(*b*) Mysore	...	8
(*c*) Mangalore Beggar Home	...	8

ಶ್ರೀ ಮಾದೇಗೌಡ.—ಈ ಕಾಲೋನಿಗಳನ್ನು ಸರಕಾರದವರು ಮಾಡತಕ್ಕ ಉದ್ದೇಶವಾದರೂ ಏನು ?

ಶ್ರೀ ಡಿ. ದೇವರಾಜ ಅರಸ್.—ಉದ್ದೇಶ ಭಿಕ್ಷುಕರ ಕಾಟ ತಪ್ಪಿಸುವುದು. ಅವರಿಗೆ ಆಶ್ರಯ ಕೊಡುವುದು.

ಶ್ರೀ ಮಾದೇಗೌಡ.—ಈ ಕಾಲೋನಿಗಳಿಂದ ಇದುವರೆಗೂ ಎಷ್ಟುಮಟ್ಟಿಗೆ ಭಿಕ್ಷುಕರ ಸಮಸ್ಯೆ ಪರಿಹಾರವಾಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ದೇಶದಲ್ಲಿರತಕ್ಕ ಎಲ್ಲಾ ಭಿಕ್ಷುಕರ ಸಮಸ್ಯೆ ಇನ್ನೂ ಪರಿಹಾರವಾಗಿಲ್ಲ ಎಂಬುದು ಗೊತ್ತಿದೆ.

ಶ್ರೀ ಜಿ. ವಿ. ಗೌಡ.—Number of inmates ಬೆಂಗಳೂರಿನಲ್ಲಿ 218, ಮೈಸೂರಿನಲ್ಲಿ ಎಂಟು, ಮಂಗಳೂರಿನಲ್ಲಿ ಎಂಟು ಎಂದು ಹೇಳಿದ್ದೀರಿ. ಈ ಭಾಗಗಳನ್ನು ಬಿಟ್ಟು ಬೇರೆ ಕಡೆ ಭಿಕ್ಷುಕರು ಇಲ್ಲ ಎಂದು ತಮ್ಮ ಅಭಿಪ್ರಾಯವೇ ?

Mr. SPEAKER.—There are no Beggars' Homes elsewhere. The places where Beggars' Homes' are established are enumerated. Is the Hon'ble Member aware of any other Beggar Home whose number has not been given ?

ಶ್ರೀ ಡಿ. ದೇವರಾಜ ಅರಸ್.— ಮಂಗಳೂರಿನಲ್ಲಿ 50 ಜನರಿಗೆ ಆಶ್ರಯ ಕೊಡುವಂಥ ವ್ಯವಸ್ಥೆ ಇದೆ. ಆದರೆ ಎಂಟು ಜನರು ಮಾತ್ರ ಇದ್ದಾರೆ. ಮೈಸೂರಿನಲ್ಲೂ ಕೂಡ 100 ಜನರಿಗೆ ಆಶ್ರಯ ಕೊಡತಕ್ಕ ವ್ಯವಸ್ಥೆ ಇದೆ. ಅಲ್ಲಿ ಪೂರ್ತಿ ಆಶ್ರಯ ಕೊಡದೇ ಇರುವುದಕ್ಕೆ ಕಾರಣ ಇನ್ನೂ ನಮಗೆ ಸರಿಯಾದ ಮನೆ ಸಿಕ್ಕಿಲ್ಲ. We are trying to construct a building seperately for that.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಂಗಳೂರು, ಮೈಸೂರು ಮತ್ತು ಮಂಗಳೂರು ಈ ಮೂರು ಕಡೆ ಭಿಕ್ಷುಕರ ಕಾಲೋನಿಗಳು ಇವೆ. ಈ ಕಾಲೋನಿಗಳನ್ನು ನಡೆಸತಕ್ಕ ಆಡಳಿತ ಮಂಡಲಿ ಯಾವುದು ?

ಶ್ರೀ ಡಿ. ದೇವರಾಜ ಅರಸ್.—ಸೆಂಟ್ರಲ್ ಬೆಗ್ಗರ್ಸ್ ರಿಲೀಫ್ ಕಮಿಟಿ ಎಂದು ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ಜನ ಅದರ ಆಡಳಿತ ಮಂಡಳಿಯಲ್ಲಿದ್ದಾರೆ ? ಅದರ ಅಧ್ಯಕ್ಷರು ಯಾರು ?

Mr. SPEAKER.—It is published in the gazette.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದು ಪೂರ್ಣವಾಗಿಲ್ಲ. ಇನ್ನು ಮೂರು ಜನರನ್ನು ಸೇರಿಸಬೇಕಾಗಿದೆ. ಅದಕ್ಕೇ ಪ್ರಶ್ನೆ ಕೇಳುತ್ತಾ ಇರುವುದು.

Mr. SPEAKER.—The names of those who have been nominated, are found in the Gazette. The Member should ask : when the vacancies will be filled up ?